ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Wednesday, 28th March 1973/Chaitra 7, 1895 (Saka Era).

The House met in the Assembly Chamber, Vidhana Soudha, at One of the Clock.

MR. DEPUTY SPEAKER (SRI B. P. KADAM) in the Chair.

STARRED QUESTIONS

(to which Oral Answers were given)

Preservation of Sandalwood Trees

674. Sri K. M. DORASWAMY NAIDU (Bethamangala).—

Will the Minister for Agriculture and Forests be pleased to state :—

(*a*) the reasons for Sandalwood trees in private holdings of the State being destroyed ;

(*b*) whether the Government have thought that the Sandalwood trees in the State would be developed by entrusting the rights to the private Hiduvalidars as it exists in Bombay Karnatak, Hyderabad Karnatak, Tamilnadu and Andhra Pradesh and maintain the name "Gandhada Gudi Idu Mysoru" ?

Sri K. H. PATIL (Minister for Agriculture and Forests).—

(*a*) Sandal is a parasite. It obtains its food by absorbing the same through its roots from the roots of other plants in the vicinity. Hence for the sandal tree to be healthy it needs the maintanence of some tree growth around it. In the private lands when these trees are removed it affects the nourishment of the sandal stems due to which it gets to be unhealthy.

(*b*) The rules concerning ownership of sandal grown in Hiduvali lands differ in the various parts of Mysore State. In some parts the ownership vests with the Hiduvalidars while in some other parts it is the property of the Government. The Mysore Forest Rules of 1969 has provided for the Government to extract the sandal in case of all areas. As per these Rules even in case of the Hiduvalidars who did not have

(SRI K. H. PATIL)

any right on the sandal they would be paid bonus estimated at 50 percent value of the sandalwood. This should encourage the Hiduvalidars to protect and maintain the sandal trees existing on their land in a healthy condition.

ಶ್ರೀ ಕೆ. ಎಂ. ದೊರಸ್ವಾಮಿ ನಾಯ್ಡು.—ನಾನು ಪ್ರಶ್ನೆ ಕೇಳಿರುವುದರ ಉದ್ದೇಶ, ಹಿಡುವಳಿ ಜಮೀನಿನಲ್ಲಿರುವ ಗಂಧದ ಮರಗಳನ್ನು ತೆಗೆದುಕೊಂಡಾಗ ಆಂಧ್ರಪ್ರದೇಶ ಮತ್ತು ತಮಿಳುನಾಡು ರಾಜ್ಯಗಳಲ್ಲಿರುವಂತೆ ಸ್ಥಳದಲ್ಲಿಯೇ ಮರಗಳನ್ನು ತೆಗೆದುಕೊಂಡು, ಅದಕ್ಕೆ ಹಣವನ್ನು ಪಾವತಿ ಮಾಡುವುದನ್ನು ತಪ್ಪಿಸುವುದಕ್ಕೋಸ್ಕರ ಈ ಮರಗಳನ್ನು ಬೆಳಸದೆ ಹಿಡುವಳಿದಾರರು ಹಾಳು ಮಾಡುತ್ತಿದ್ದಾರೆನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

† ಶ್ರೀ ಕೆ. ಎಚ್. ಪಾಟೀಲ್.—ಮಾನ್ಯ ಸದಸ್ಯರಿಗೆ ಗೊತ್ತಿರುವಂತೆ ಮೊದಲು ಸ್ವಲ್ಪ ಹಣವನ್ನು ಗಿಡ ಬೆಳೆದವರಿಗೆ ಕೊಡುತ್ತಿದ್ದರು. ಈಗ ಗಂಧದ ಮರವನ್ನು ಬೆಳೆಯುವುದಕ್ಕೆ ಉತ್ತೇಜನವನ್ನು ಕೊಡುವುದರ ನಲುವಾಗಿ ಬೆಲೆಯಲ್ಲಿ 50 ಪರ್ಸೆಂಟ್ ಕೊಡಲಕ್ಕೆ ನಿರ್ಣಯ ಮಾಡಿದೆ.

ಶ್ರೀ ಕೆ. ಎಂ. ದೊರಸ್ವಾಮಿ ನಾಯ್ಡು.—ಆ ರೀತಿ ಕೊಡಬೇಕೆಂದು ಮಾಡಿರುವುದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಸ್ಥಳದಲ್ಲಿಯೇ ಮರಗಳನ್ನು ಸರ್ವೆ ಮಾಡಿ, ಕ್ಲಾಸಿಫೈ ಮಾಡಿ ಹಣವನ್ನು ಪಾವತಿ ಮಾಡಲಾಗುತ್ತದೆಯೇ ?

* ಶ್ರೀ ಕೆ. ಎಚ್. ಪಾಟೀಲ್.—ಇದು ಯೋಗ್ಯವಾದ ಸಲಹೆ ಇದೆ. ಹಣವನ್ನು ಸ್ಥಳದಲ್ಲಿಯೇ ಪಾವತಿ ಮಾಡುವುದು ಆಗಲಕ್ಕಿಲ್ಲ. ಸ್ಥಳದಲ್ಲಿಯೇ ಸರ್ವೆ ಮಾಡಿ ಇಂಥಿಂಥವರ ಮರ ಎನ್ನುವುದನ್ನು ಗೊತ್ತು ಮಾಡಲಕ್ಕೆ ಸಾಧ್ಯವಾಗುತ್ತದೆ. ಅದನ್ನು ಪರಿಶೀಲನೆ ಮಾಡೋಣ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಖಾಸಗಿ ಜಮೀನುಗಳಲ್ಲಿರುವ ಗಂಧದ ಮರಗಳನ್ನು ಈಗ ತೆಗೆದುಕೊಂಡು ಹೋಗಿ, ಚೆಕ್ಕೆ ತೆಗೆದು, ಸರ್ವೆ ಮಾಡಿ, ಕ್ಲಾಸಿಫೈ ಮಾಡಿ ಹಣವನ್ನು ಕೊಡಬೇಕಾದರೆ ಹತ್ತಾರು ತಿಂಗಳು ಆಗುತ್ತದೆ. ಹತ್ತಾರು ತಿಂಗಳು ಕಳೆದ ಮೇಲೆ ಮಾಲೀಕನಿಗೆ ಹಣವನ್ನು ಕೊಡತಕ್ಕ ಪದ್ಧತಿ ಇದೆ. ಕೇರಳ, ತಮಿಳುನಾಡು ರಾಜ್ಯಗಳಲ್ಲಿರುವಂತೆ ಅಧಿಕಾರವರ್ಗದವರು ಸ್ಥಳದಲ್ಲಿಯೇ ಪರೀಕ್ಷೆ ಮಾಡಿ ಬೇಗ ಹಣ ಪಾವತಿ ಮಾಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ಈಗಾಗಲೇ ಮಾನ್ಯ ಸದಸ್ಯರು ಇದೇ ಪ್ರಶ್ನೆ ಕೇಳಿದ್ದಕ್ಕೆ ಉತ್ತರ ಹೇಳಿದ್ದೇನೆ.

Improvement of Transport System in Bangalore City

258. Sri M. H. JAYAPRAKASH NARAYAN (Sirsi).—

Will the Minister for Public Works and Electricity be pleased to state :—

(*a*) the details of the study conducted by the State Government to arrange for Railway Transport so as to improve transport system in Bangalore City ;

(*b*) whether the Metropolitan City Transport Board had been asked to conduct a survey for erecting a circular or underground railway ;

(*c*) if so, the progress achieved in this behalf ?

†Indicates that the remarks or speeches have not been revised by the member concerned.